
ANANTHKUMAR PRATISHTHANA

# ಅನಂತಪಥ

‘ವಿಶ್ವಾಸ ತುಂಬಿದ ಅನಂತ ಚೈತನ್ಯ’
ಶ್ರೀ ಶಂಕರಮೂರ್ತಿ ಡಿ ಎಚ್
ಪುಟ 6



ಸಂಪುಟ - 3 | ಅಕ್ಟೋಬರ್ - 2022 | ಸಂಚಿಕೆ - 28

## ಅನಂತಯಾನ ಪುಸ್ತಕದ ಲೋಕಾರ್ಪಣೆ


# ‘ಭವ್ಯಭಾರತದ ಕನಸುಗಾರ ಅನಂತಕುಮಾರ್’

### - ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ




ನಾನು ನನ್ನ ವಿದ್ಯಾರ್ಥಿದೆಸೆಯಿಂದಲೂ ಅನಂತಕುಮಾರರ ಎಂ.ಟಿ.ಎಸ್ ಕಾಲೋನಿಯ ಮನೆಗೆ ನಿರಂತರವಾಗಿ ಹೋಗುತ್ತಿದ್ದೆ. ಅವರ ಮನೆಯಲ್ಲಿ ಪ್ರತಿಯೊಬ್ಬರೂ ನನ್ನನ್ನು ತಮ್ಮ ಕುಟುಂಬದ ಸದಸ್ಯರಂತೆ ಪರಿಗಣಿಸಿದ್ದರು. ನಾನು ಧಾರವಾಡದ ಕರ್ನಾಟಕ ಕಾಲೇಜಿಗೆ ಪಿಯುಸಿ ಓದಿಗೆ ಸೇರಿಕೊಂಡಾಗ ಗೆಳೆಯ ರಾಜೇಂದ್ರ ಗೋಖಲೆಯವರು ನನ್ನನ್ನು ವಿದ್ಯಾರ್ಥಿ ಪರಿಷತ್ತಿಗೆ ಸೇರಿಸಿದರು. ಮೊದಲಿನಿಂದಲೂ ನಾನು ಸಂಘದ ಸ್ವಯಂಸೇವಕನಾಗಿದ್ದರೂ ಧಾರವಾಡಕ್ಕೆ ಬಂದ ನಂತರ ವಿದ್ಯಾರ್ಥಿ ಪರಿಷತ್ತಿನ ಸಂಪರ್ಕ ದೊರೆಯಿತು. ಸಹಜವಾಗಿಯೇ ಅನಂತಕುಮಾರರ ಒಡನಾಟ ತತ್ಕ್ಷಣವೇ ಪ್ರಾರಂಭವಾಯಿತು. ಅನಂತಕುಮಾರರದು ಆಕರ್ಷಕ ವ್ಯಕ್ತಿತ್ವ. ಅವರ ಮನೆಗೆ ಹೋದವರೆಲ್ಲರಿಗೂ ಅದು ತಮ್ಮ ಮನೆಯೇ ಎನ್ನಿಸುವಂತಹ ವಾತಾವರಣ ಅಲ್ಲಿತ್ತು. ಎಲ್ಲರಿಗೂ ಅನಂತಕುಮಾರ್ ತಮ್ಮವರೇ ಎಂಬ ಭಾವನೆ ಹುಟ್ಟಿಸುವ ಸ್ನೇಹಮಯ ವ್ಯಕ್ತಿತ್ವ ಅವರದು. ಅನಂತಕುಮಾರರ ಪ್ರಭಾವದಿಂದ ನಾನೂ ಹೊರತಾಗಿಲ್ಲ. ನಮ್ಮೆಲ್ಲರ ವ್ಯಕ್ತಿತ್ವದಲ್ಲಿಯೂ ಅನಂತಕುಮಾರರ ಛಾಯೆ ಇದ್ದೇ ಇದೆ. ಅನಂತಕುಮಾರ್ ಇದ್ದಲ್ಲಿ ನಿರಂತರ ಕ್ರಿಯಾಶೀಲತೆಯಿರುತ್ತಿತ್ತು. ವಾತಾವರಣವೂ ಗಂಭೀರವಾಗಿದ್ದಷ್ಟೇ ವಿನೋದಮಯವಾಗಿಯೂ ಇರುತ್ತಿತ್ತು. ಅವರ ಜೊತೆ ಇರುವುದೆಂದರೆ ಜವಾಬ್ದಾರಿಗಳನ್ನು ಹೆಚ್ಚಿಸಿಕೊಳ್ಳುವುದು. ಅವರನ್ನು ನೆನಪಿಸಿಕೊಳ್ಳುವುದೆಂದರೆ ಹೆಚ್ಚಿನ ಜವಾಬ್ದಾರಿಗಳನ್ನು ವಹಿಸಿಕೊಳ್ಳುವುದು ಮತ್ತು ಅವರ ಕೆಲಸಗಳನ್ನು ಮುಂದುವರಿಸಿಕೊಂಡು ಹೋಗುವುದು.

ನಮ್ಮ ಇಂದಿನ ಸಮಾಜ ಮತ್ತು ರಾಜಕೀಯವನ್ನು ಗಮನಿಸಿದಾಗ ನಾವೆಲ್ಲರೂ ಅನಂತಕುಮಾರರಂತೆ ವಿಶಾಲವಾದ ದೃಷ್ಟಿಕೋನವನ್ನು ಬೆಳೆಸಿಕೊಂಡು ರಾಷ್ಟ್ರೀಯ ಬದ್ಧತೆಯಿಂದ ಕೆಲಸ ಮಾಡುವುದು ಅಗತ್ಯ ಎಂದು ತಿಳಿಯುತ್ತದೆ. ಇದು ನಮ್ಮೆಲ್ಲರ ವೈಯಕ್ತಿಕ ಜವಾಬ್ದಾರಿಯಾದಾಗ ಮಾತ್ರ ಪರಿವರ್ತನೆ ಸಾಧ್ಯವಾಗುತ್ತದೆ. ನಮ್ಮ ವೈಯಕ್ತಿಕ ಜೀವನದಲ್ಲಿ ಪರಿವರ್ತನೆಯಾದಾಗ ಮಾತ್ರ ಸಮಾಜದಲ್ಲಿಯೂ ಪರಿವರ್ತನೆಯಾಗುತ್ತದೆ. ಅನಂತಕುಮಾರರು ತಮ್ಮ ವೈಯಕ್ತಿಕ ಜೀವನದಲ್ಲಿ ಉತ್ತಮ ಸಂಸ್ಕಾರ, ಸಂಸ್ಕೃತಿ ಮತ್ತು ಬದ್ಧತೆಗಳನ್ನು ರೂಢಿಸಿಕೊಂಡಿದ್ದರಿಂದ ಅವರಿಗೆ ಇಷ್ಟೆಲ್ಲ ಸಾಧನೆಗಳನ್ನು ಮಾಡುವುದು ಸಾಧ್ಯವಾಯಿತು. ಉತ್ತಮ ವ್ಯಕ್ತಿತ್ವಕ್ಕೆ ಮಾದರಿಯಾಗುವಂತೆ ಅವರು ಬದುಕಿದರು. ರಾಜಕಾರಣ ಮತ್ತು ಸಮಾಜದ ಎಲ್ಲ ವ್ಯವಸ್ಥೆಗಳಲ್ಲಿಯೂ ದೋಷಗಳಿರುತ್ತವೆ. ಇಂದು ನಾವೇ ನಿರ್ಮಿಸಿಕೊಂಡಿರುವ ವಿಷವರ್ತುಲದಲ್ಲಿ ನಾವೆಲ್ಲರೂ ಬದುಕುತ್ತಿದ್ದೇವೆ. ಇದರಿಂದ ಹೊರಗೆ ಬಂದು ನಮ್ಮ ವ್ಯಕ್ತಿತ್ವದಲ್ಲಿ ಪರಿವರ್ತನೆ ಮಾಡಿಕೊಂಡರೆ ಮಾತ್ರ ಆದರ್ಶ ಸಮಾಜವೊಂದರ ನಿರ್ಮಾಣ ಸಾಧ್ಯ. ಅನಂತಕುಮಾರರು ತಮ್ಮ ಸಾಮಾಜಿಕ ಮತ್ತು ರಾಷ್ಟ್ರೀಯ ಬದ್ಧತೆಗಳ ವ್ಯಕ್ತಿತ್ವದ ಮೂಲಕ ಅನೇಕರಿಗೆ ಪ್ರೇರಣೆ ನೀಡಿ ಆದರ್ಶ ವ್ಯಕ್ತಿಯಾಗಿ ನಮ್ಮೆದುರು ಕಾಣಿಸಿಕೊಂಡಿದ್ದರು. ನಮಗೆ ಅವರಂತೆ ಪ್ರಖರ ಸೂರ್ಯನಾಗಿ ಬೆಳಗುವುದಕ್ಕಾಗದಿದ್ದರೂ ಅವರು ಹಚ್ಚಿದ ಹಣತೆಯಂತೆ ನಮ್ಮ ಮಿತಿಗಳಲ್ಲಿ ಪ್ರಕಾಶ ಬೀರುವುದು ನಮಗೆ ಸಾಧ್ಯವಾಗಿದೆ. ಭವ್ಯ ಭಾರತದ ಬಗ್ಗೆ ಅನಂತಕುಮಾರ್ ಅನೇಕ ಕನಸುಗಳನ್ನು ಹೊಂದಿದ್ದರು. ಅವರ ಕನಸುಗಳನ್ನು ನನಸು ಮಾಡಲು ನಾವೆಲ್ಲರೂ ಕಂಕಣಬದ್ಧರಾಗಬೇಕು. ಅನಂತಕುಮಾರ್ ನಮ್ಮನಡುವೆ ಇಲ್ಲದಿರಬಹುದು. ಆದರೆ ಅವರ ವ್ಯಕ್ತಿತ್ವ, ಕರ್ತವ್ಯನಿಷ್ಠೆ ಮತ್ತು ಸಾಧನೆಗಳು ನಮ್ಮ ಹೃದಯದಲ್ಲಿ ನೆಲೆ ಮಾಡಿವೆ. ಅವರ ಕೆಲಸಗಳನ್ನು ಅವರಂತೆಯೇ ಕ್ರಿಯಾಶೀಲರಾಗಿರುವ ತೇಜಸ್ವಿನಿ ಅನಂತಕುಮಾರ್ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಅನಂತಕುಮಾರ್ ತಮ್ಮ ಸಾಧನೆಗಳ ಉತ್ತುಂಗದಲ್ಲಿದ್ದಾಗಲೂ ಅವರ ಹಿಂದಿನ ಶಕ್ತಿ ತೇಜಸ್ವಿನಿಯವರೆಂಬುದು ನಮಗೆ ನಿಚ್ಚಳವಾಗಿ ಗೋಚರವಾಗುತ್ತಿತ್ತು. ಅದನ್ನು ಅನಂತಕುಮಾರರೂ ನಮ್ಮೊಂದಿಗೆ ಹೇಳಿಕೊಂಡಿದ್ದರು. ತೇಜಸ್ವಿನಿಯವರ ಜೊತೆ ಕೈಜೋಡಿಸುವುದೇ ನಾವು ಈಗ ಮಾಡಬೇಕಾಗಿರುವ ಕೆಲಸ. ●







ದಿನಾಂಕ 22 ಸೆಪ್ಟೆಂಬರ್ 2022 ರಂದು ಅನಂತ ಸ್ಮರಣೆಯ ಸಂದರ್ಭದಲ್ಲಿ ಅನಂತಪಥ ಮಾಸ ಪತ್ರಿಕೆಯ 27 ನೇ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು. ಈ ಸಂದರ್ಭದಲ್ಲಿ ಸರ್ವಶ್ರೀ ನಂದಕುಮಾರ್, ಆನೂರು ಅನಂತ ಕಷ್ಣ ಶರ್ಮಾ, ತೇಜಸ್ವಿನಿ ಅನಂತಕುಮಾರ್, ನ್ಯಾಯಮೂರ್ತಿ ಎನ್. ಕುಮಾರ್, ಪ್ರೊ. ಪಿ.ವಿ ಕೃಷ್ಣ ಭಟ್, ಬಸವರಾಜ ಪಾಟೀಲ್ ಯತ್ನಾಳ್, ಡಿ ಎಸ್ ವೀರಯ್ಯ, ಚಿ.ನಾ ರಾಮು ಮೊದಲಾದವರು ಹಾಜರಿದ್ದರು.























# ಅನಂತ ಸ್ಮರಣೆ – ೬೩

**೨೨ ಸೆಪ್ಟೆಂಬರ್ ೨೦೨೨** ಅನಂತಕುಮಾರರ ೬೩ನೆಯ ಜನ್ಮದಿನ, ಇದನ್ನು ಅರ್ಥಪೂರ್ಣವಾಗಿ ಆಚರಿಸಲು ಅದಮ್ಯ ಚೇತನ ಮತ್ತು ಅನಂತಕುಮಾರ್ ಪ್ರತಿಷ್ಠಾನಗಳು ಎರಡು ದಿನಗಳ ವೈವಿಧ್ಯಮಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದವು. ಪ್ರಧಾನ ಕಾರ್ಯಕ್ರಮಗಳು ಬೆಂಗಳೂರಿನ ಜೈನಭವನದಲ್ಲಿ ನಡೆದವು.

ಬೆಂಗಳೂರಿನಲ್ಲಿ ಅದಮ್ಯ ಚೇತನದಿಂದ ಬಿಸಿಯೂಟ ಪಡೆಯುವ ಶಾಲೆಗಳ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸುವ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದೊಂದಿಗೆ ನವೆಂಬರ್೨೧ರ ಸಂಜೆ ೪:೩೦ಕ್ಕೆ ಉತ್ಸವಕ್ಕೆ ಚಾಲನೆ ದೊರಕಿತು. ಉತ್ಸವದ ಅಂಗವಾಗಿ ಏರ್ಪಡಿಸಿದ್ದ ಪ್ರದರ್ಶಿನಿಗಳನ್ನು ಪ್ರಸಿದ್ಧ ಚಲನಚಿತ್ರ ನಟಿ ಶ್ರೀಮತಿ ತಾರಾ ಅನೂರಾಧ ಉದ್ಘಾಟಿಸಿದರು. ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಸ್ವಾಗತಿಸಿ, ಅದಮ್ಯ ಚೇತನ, ಅನಂತಕುಮಾರ್ ಪ್ರತಿಷ್ಠಾನ ಮತ್ತು ಅನಂತ ಪ್ರೇರಣಾ ಕೇಂದ್ರಗಳ ಚಟುವಟಿಕೆಗಳ ಪರಿಚಯ ನೀಡಿದರು. ವಿಧಾನಸಭಾ ಸಭಾಪತಿ, ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಹಿರಿಯ ಲೇಖಕ ಶ್ರೀ ಟಿ ಎಸ್ ಗೋಪಾಲ್ ಬರೆದಿರುವ ಅನಂತಕುಮಾರರ ಜೀವನಚರಿತ್ರೆಯ ಮೊದಲ ಭಾಗ "ಅನಂತಯಾನ" ಪುಸ್ತಕವನ್ನು ಬಿಡುಗಡೆ ಮಾಡಿದರು. ಸಮಾರಂಭದಲ್ಲಿ ನಿವೃತ್ತ ನ್ಯಾಯಮೂರ್ತಿ ಶ್ರೀ ಎಸ್ ಕುಮಾರ್, ಸಾಹಿತಿ ಶ್ರೀ ದೊಡ್ಡರಂಗೇ ಗೌಡ, ಬೇಸ್ ಸಂಸ್ಥೆಯ ಸ್ಥಾಪಕ ನಿರ್ದೇಶಕ ಶ್ರೀ ವಿ ನಾಗರಾಜ್, ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷ ಪ್ರೊ|| ಪಿ ವಿ ಕೃಷ್ಣಭಟ್ ಮುಂತಾದ ಗಣ್ಯರು ಭಾಗವಹಿಸಿದ್ದರು.

ಅನಂತಕುಮಾರರಿಗೆ ಪ್ರಿಯವಾಗಿದ್ದ ಸಸ್ಯಾಗ್ರಹದ ಅಂಗವಾಗಿ ಗವಿಪುರದ ಕೆಂಪಾಂಬುಧಿ ಕೆರೆಯ ಆವರಣದಲ್ಲಿ ೬೩ ವಿವಿಧ ಸಸ್ಯಗಳನ್ನು ನೆಡುವುದರ ಮೂಲಕ ಎರಡನೆಯ ದಿನದ ಕಾರ್ಯಕ್ರಮಗಳು ೨೨ರ ಬೆಳಿಗ್ಗೆ ೬ ಗಂಟೆಗೆ ಪ್ರಾರಂಭವಾದವು. ೮೭ ರಿಂದ ೯೭ರ ದಶಕದಲ್ಲಿ ಅನಂತಕುಮಾರರ ಒಡನಾಡಿಗಳಾಗಿದ್ದ ಗಣ್ಯರಿಂದ "ಅನಂತ ಸ್ಮರಣೆ" ಕಾರ್ಯಕ್ರಮವು ಬೆಳಿಗ್ಗೆ ಹನ್ನೊಂದು ಗಂಟೆಗೆ ಪ್ರಾರಂಭವಾಯಿತು. ಶ್ರೀ ಸದಾಶಿವಯ್ಯ, ಮಾಜಿ ಉಪ ಮುಖ್ಯಮಂತ್ರಿ ಶ್ರೀ ಕೆ ಎಸ್ಈಶ್ವರಪ್ಪ, ವಿಧಾನಪರಿಷತ್ ಮಾಜಿ ಸಭಾಪತಿ ಶ್ರೀ ಡಿ ಎಚ್ ಶಂಕರ ಮೂರ್ತಿ, ಮಾಜಿ ಶಾಸಕ ಶ್ರೀ ರಾಮಚಂದ್ರ ಗೌಡ, ಮಾಜಿ ಕೇಂದ್ರ ಸಚಿವ ಶ್ರೀ ಡಿ ವಿ ಸದಾನಂದ ಗೌಡ, ಕರ್ನಾಟಕ ಬಿಜೆಪಿ ಅಧ್ಯಕ್ಷ, ಶ್ರೀ ನಳಿನ್ ಕುಮಾರ್ ಕಟೀಲ್ ಮುಂತಾದ ಗಣ್ಯರು ಅನಂತಕುಮಾರರ ನೆನಪುಗಳನ್ನು ಹಂಚಿಕೊಂಡರು. ನಂತರ ವಿದ್ಯಾರ್ಥಿ ಪರಿಷತ್ತಿನಲ್ಲಿ ಅನಂತಕುಮಾರರ ಜೊತೆ ಕೆಲಸ ಮಾಡಿದ ಕಾರ್ಯಕರ್ತರ ಸಮಾವೇಶ ನಡೆಯಿತು.

ಸಂಜೆ ೪:೩೦ಕ್ಕೆ ಪ್ರತಿಭಾ ಪುರಸ್ಕಾರ ಜರುಗಿತು. ಪಬ್ಲಿಕ್ ಟಿ ವಿ ಮುಖ್ಯಸ್ಥ ಶ್ರೀ ಎಚ್ ಎನ್ ರಂಗನಾಥ್, ಶ್ರೀ ತಿಪ್ಪೇಸ್ವಾಮಿ, ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ, ಶ್ರೀ ವಿ ನಾಗರಾಜ್, ಶ್ರೀ ಸುರೇಂದ್ರ ಕುಮಾರ್ ಹೆಗಡೆ, ಶ್ರೀ ಲಕ್ಷ್ಮಣ ರಾವ್ ಓಕ್, ಶ್ರೀ ಸುಚೇಂದ್ರಪ್ರಸಾದ್ ಮತ್ತಿತರರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ನಂತರ ಭಗವದ್ಗೀತೆಯ ಸಾಮೂಹಿಕ ಪಠಣ, ಸಾಂಸ್ಕೃತಿಕ ಕೇಂದ್ರ, ಎ-ಚಾಟ್ ಉದ್ಘಾಟನೆ, ೬೩ ದೇವಾಲಯಗಳನ್ನು ಪರಿಚಯಿಸುವ ಕರಪತ್ರಗಳು, ಬುಕ್‌ಮಾರ್ಕರ್‌ಗಳು ಮತ್ತು ಅನಂತಪಥ ವಿಶೇಷ ಸಂಚಿಕೆಯ ಬಿಡುಗಡೆ ಹಾಗೂ ಸನ್ಮಾನ ಕಾರ್ಯಕ್ರಮಗಳು ನಡೆದವು. ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಜಗದೀಶ್ ಶೆಟ್ಟರ್, ಜಲಸಂಪನ್ಮೂಲ ಸಚಿವ, ಶ್ರೀ ಗೋವಿಂದ ಕಾರಜೋಳ, ಶ್ರೀ ಡಿ ಎಸ್ ವೀರಯ್ಯ, ಶ್ರೀ ಚಿ ನಾ ರಾಮು, ಶ್ರೀ ರಾಜು ಪಾಟೀಲ್, ಶ್ರೀ ಅಮರನಾಥ ಪಾಟೀಲ್ ಮುಂತಾದ ಗಣ್ಯರು ಈ ಕಾರ್ಯಕ್ರಮಗಳನ್ನು ನೆರವೇರಿಸಿಕೊಟ್ಟರು. ಪ್ರೊ|| ಪಿ ವಿ ಕೃಷ್ಣಭಟ್ಟರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ●





## ಅದಮ್ಯ ಸೇವಾ

( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )



ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಹಕಾರ್ಯವಾಹ ಸನ್ಮಾನ್ಯ ದತ್ತಾತ್ರೇಯ ಹೊಸಬಾಳೆ ಅವರು ಜೋಧಪುರ ಅದಮ್ಯ ಚೇತನ ಅಡಿಗೆ ಕೇಂದ್ರಕ್ಕೆ ಭೇಟಿ ನೀಡಿದ್ದರು.



ದಸರಾ ಹಬ್ಬದ ನಿಮಿತ್ತವಾಗಿ ದೇವಿ ಪೂಜೆಯನ್ನು ಅನಂತ ಪ್ರೇರಣಾ ಕೇಂದ್ರದಲ್ಲಿ ಸಡಗರದಿಂದ ಆಚರಿಸಲಾಯಿತು



ಮೈಸೂರಿನ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯಲ್ಲಿ ನಡೆದ ಅಖಿಲ ಭಾರತ ಶರಣ ಸಾಹಿತ್ಯ ಕದಳಿ ಮಹಿಳಾ ವೇದಿಕೆ ಸಮಾರಂಭವನ್ನು ತೇಜಸ್ವಿನಿ ಅನಂತಕುಮಾರ್ ಅವರು ಉದ್ಘಾಟಿಸಿದರು.



ರಾಷ್ಟ್ರ ಜಾಗೃತಿ ಅಭಿಯಾನದ ರಾಜ್ಯ ಸಂಚಾಲಕರಾದ ಶ್ರೀ ರವಿ ಹೊಯ್ಸಳ ರವರು ತೇಜಸ್ವಿನಿ ಅನಂತಕುಮಾರ್‌ರವರನ್ನು ಗೌರವಿಸಿದರು.



ಲಕ್ಷ್ಮೀಶ ಫೌಂಡೇಶನ್ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ತೇಜಸ್ವಿನಿ ಅನಂತಕುಮಾರ್ ಭಾಗಿಯಾಗಿದ್ದರು.



ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಇತ್ತೀಚೆಗೆ ಉತ್ತರ ಪ್ರದೇಶದ ಮುಖ್ಯಮಂತ್ರಿ ಶ್ರೀ ಯೋಗಿ ಆದಿತ್ಯನಾಥರನ್ನು ಭೇಟಿಯಾದ ಸಂದರ್ಭದ ಚಿತ್ರ




ಅದಮ್ಯ ಚೇತನದಲ್ಲಿ ನಡೆದ ಭಗವದ್ಗೀತೆ ಶ್ಲೋಕ ಪಠಣ ಕಾರ್ಯಕ್ರಮ.



ಅನಂತ ಪ್ರೇರಣಾ ಕೇಂದ್ರಕ್ಕೆ ಜಯದೇವ ಹೃದ್ರೋಗ ಮತ್ತು ಸಂಶೋಧನ ಸಂಸ್ಥೆಯ ನಿರ್ದೇಶಕರಾದ ಡಾ. ಸಿ.ಎನ್.ಮಂಜುನಾಥ್ ಅವರು ಭೇಟಿ ನೀಡಿದ್ದರು.



ನ್ಯಾಯಮೂರ್ತಿ ಎನ್.ಕುಮಾರ್ ಅವರು ಅನಂತ ಪ್ರೇರಣಾ ಕೇಂದ್ರಕ್ಕೆ ಭೇಟಿ ನೀಡಿದ ಸಂದರ್ಭ.



ಶ್ರೀ ಅನಂತಕುಮಾರರ 63ನೇ ಹುಟ್ಟುಹಬ್ಬದ ನೆನಪಿಗೆ 63 ಗಿಡಗಳನ್ನು ನೆಡಲಾಯಿತು



ಗೋರಖಪುರದ ದೀನ ದಯಾಳ ಉಪಾಧ್ಯಾಯ ವಿಶ್ವವಿದ್ಯಾಲಯದ ವಿಚಾರಗೋಷ್ಠಿ ಕಾರ್ಯಕ್ರಮದಲ್ಲಿ ಉತ್ತರಪ್ರದೇಶದ ರಾಜ್ಯಪಾಲರಾದ ಶ್ರೀಮತಿ ಆನಂದಿಬೆನ್ ಪಟೇಲ್ ಹಾಗೂ ಕುಲಪತಿ ಪ್ರೊ.ರಾಜೇಶ ಸಿಂಹ ಅವರೊಡನೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಭಾಗವಹಿಸಿದ್ದರು

## ಅನಂತ ಚಿತ್ರಸಂಪುಟ

**ತಮ್ಮ ಬಿಡುವಿರದ ಕಾರ್ಯಕ್ರಮಗಳ ನಡುವೆಯೂ ಅನಂತಕುಮಾರರು ದೇಶದ ಬೇರೆ ಬೇರೆ ಭಾಗಗಳಲ್ಲಿ ನಡೆಯುತ್ತಿದ್ದ ಉದ್ಘಾಟನೆ, ಶಿಲಾನ್ಯಾಸ ಮುಂತಾದ ಕಾರ್ಯಕ್ರಮಗಳಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿದ್ದರು**











